# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**೧. ಸೋದರಿ ನಿವೇದಿತಾ ಅವರ ೧೫೦ನೇ ಜಯಂತಿ ಆಚರಣೆ:** ವಿವಿಧ ಶಾಖಾಕೇಂದ್ರಗಳಲ್ಲಿ ಸೋದರಿ ನಿವೇದಿತಾ ಅವರ ೧೫೦ನೇ ಜಯಂತಿಯ ಆಚರಣೆಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆದವು. ಆಯಾ ಕೇಂದ್ರಗಳ ಹಾಗೂ ಚಟುವಟಿಕೆಗಳ ವಿವರಗಳು ಹೀಗಿವೆ:

**ಅಸನ್ಸೋಲ್** ಕೇಂದ್ರದಲ್ಲಿ ನಡೆದ **ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮ**ಗಳಲ್ಲಿ ೧೧ ಶಾಖೆಗಳಿಂದ ಬಂದ ೧೪೧೨ ವಿದ್ಯಾರ್ಥಿಗಳು ಭಾಗವಹಿಸಿದರು. ವಿಜೇತರಿಗೆ ಫೆಬ್ರವರಿ ೨೨ರಂದು ನಡೆದ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಯಿತು. ಮಾರ್ಚ್ ೨೪ರಂದು ಪ್ರಧಾನ ಕಾರ್ಯದರ್ಶಿಯವರು ನೀಡಿದ ಪ್ರವಚನದಲ್ಲಿ ೬೦೦ ಮಂದಿ ಭಕ್ತರು ಭಾಗವಹಿಸಿದ್ದರು. **ಬಾಗ್ದಾ** ಕೇಂದ್ರದಲ್ಲಿ ಮಾರ್ಚ್ ೨೪ರಂದು ನಡೆದ **ವಿದ್ಯಾರ್ಥಿ ಸಮಾವೇಶ**ದಲ್ಲಿ ಪ್ರಧಾನವಾಗಿ ಬುಡಕಟ್ಟು ಜನಾಂಗಕ್ಕೆ ಸೇರಿದ ೨೫೦ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. **ಗದಾಧರ ಆಶ್ರಮ**ವು ಫೆಬ್ರವರಿ ೨೭ ಹಾಗೂ ೨೮ ರಂದು ಹೂಗ್ಲಿ ಜಿಲ್ಲೆಯ ಎರಡು ಶಾಲೆಗಳಲ್ಲಿ ನಡೆಸಿದ **ವಿದ್ಯಾರ್ಥಿ ಸಮಾವೇಶ**ದಲ್ಲಿ ೬೦೦ ಮಂದಿ ಭಕ್ತರು ಪಾಲ್ಗೊಂಡರು. **ಕೈಲಾಸ್ ಶಹರ್** ಆಶ್ರಮವು ಮಾರ್ಚ್ ೧೯ ರಂದು ಆಯೋಜಿಸಿದ **ಭಕ್ತ ಸಮಾವೇಶ**ದಲ್ಲಿ ೬೦೦ ಮಂದಿ ಭಕ್ತರು ಪಾಲ್ಗೊಂಡರು. **ಕರೀಂಗಂಜ್:** ಫೆಬ್ರವರಿ ೧೮ರಂದು ನಡೆದ **ಭಕ್ತ ಸಮಾವೇಶ** ಹಾಗೂ ಫೆಬ್ರವರಿ ೨೪ರಂದು ನಡೆದ **ಯುವ ಸಮಾವೇಶ** ಕಾರ್ಯಕ್ರಮಗಳಲ್ಲಿ ೫೧೭ ಮಂದಿ ಭಾಗವಹಿಸಿದ್ದರು. **ಪುರುಲಿಯಾ** ಕೇಂದ್ರವು ಮಾರ್ಚ್ ೨೩ ರಂದು ಪುರುಲಿಯಾ ನಗರದಲ್ಲಿ ಏರ್ಪಡಿಸಿದ **ಯುವ ಸಮ್ಮೇಳನ**ದಲ್ಲಿ ಪ್ರಧಾನ ಕಾರ್ಯದರ್ಶಿಯವರು ಅಧ್ಯಕ್ಷತೆ ವಹಿಸಿದ್ದರು. ಇದರಲ್ಲಿ ಸುಮಾರು ೭೦೦ ಮಂದಿ ಯುವಕರು ಪಾಲ್ಗೊಂಡಿದ್ದರು. ಪಶ್ಚಿಮ ಬಂಗಾಳ ಸರ್ಕಾರದ ಉನ್ನತ ಶಿಕ್ಷಣ ವಿಭಾಗದ ಸಹಯೋಗದೊಂದಿಗೆ ಸಮ್ಮೇಳನವನ್ನು ಆಯೋಜಿಸಲಾಗಿತ್ತು. **ರಾಜ್‌ಕೋಟ್** ಕೇಂದ್ರವು ಮಾರ್ಚ್ ೧೧ರಂದು ಒಂದು **ಆಧ್ಯಾತ್ಮಿಕ ಶಿಬಿರ**ವನ್ನೂ, ಮಾರ್ಚ್ ೨೦ರಂದು **ಯುವಸಮ್ಮೇಳನ**ವನ್ನೂ ಮಾರ್ಚ್ ೨೬ರಂದು ಒಂದು **ಪ್ರವಚನ ಕಾರ್ಯಕ್ರಮ**ವನ್ನೂ ಏರ್ಪಡಿಸಿದ್ದು, ಈ ಕಾರ್ಯಕ್ರಮಗಳಲ್ಲಿ ಒಟ್ಟು ೨೦೦೦ ಮಂದಿ ಭಾಗವಹಿಸಿದ್ದರು. **ರಾಮಹರಿಪುರ** ಆಶ್ರಮದ ವತಿಯಿಂದ ಮಾರ್ಚ್ ೩ ಹಾಗೂ ೪ರಂದು **ವಾಲಿಬಾಲ್ ಪಂದ್ಯಾಟ**ವನ್ನು ಏರ್ಪಡಿಸಿದ್ದು, ಅದರಲ್ಲಿ ೧೬ ತಂಡಗಳು ಭಾಗವಹಿಸಿದ್ದವು. ಮಾರ್ಚ್ ೪ ರಂದು **ಅಧ್ಯಾಪಕರ ಸಮಾವೇಶ** ನಡೆಯಿತು. ಇದರಲ್ಲಿ ೬೫ ಶಾಲೆಗಳಿಂದ ಬಂದ ೨೪೩ ಅಧ್ಯಾಪಕರು ಪಾಲ್ಗೊಂಡರು. **ಶಾರದಾಪೀಠ:** ಮಾರ್ಚ್ ೧೦ ಹಾಗೂ ೧೧ರಂದು **ವಿದ್ಯಾಮಂದಿರ**ದಲ್ಲಿ **ಸೋದರಿ ನಿವೇದಿತಾ** ಎಂಬ ವಿಷಯವನ್ನು ಕುರಿತ **ಅಂತರರಾಷ್ಟ್ರೀಯ ವಿಚಾರ ಸಂಕಿರಣ**ವು ನಡೆಯಿತು. ಇದರಲ್ಲಿ ಪ್ರಧಾನ ಕಾರ್ಯದರ್ಶಿಯವರು ಪ್ರಾಸ್ತವಿಕ ನುಡಿಗಳನ್ನು ಆಡಿದರು. ಸುಮಾರು ೪೦೦ ಮಂದಿ ಇದರಲ್ಲಿ ಭಾಗ ವಹಿಸಿದ್ದರು. **ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆ :** ಈ ಕೇಂದ್ರದಲ್ಲಿ ಹಾಗೂ ಕೊಲ್ಕತ್ತಾದ ಇತರ ಪ್ರದೇಶಗಳಲ್ಲಿ ಫೆಬ್ರವರಿ ೨೭ರಿಂದ ಮಾರ್ಚ್ ೧೬ರ ವರೆಗೆ ಐದು **ಪ್ರವಚನ**ಗಳು ನಡೆದವು. ಈ ಎಲ್ಲ ಕಾರ್ಯಕ್ರಮಗಳಲ್ಲಿ ೨೬೮೦ ಮಂದಿ ಜನರು ಪಾಲ್ಗೊಂಡರು. **ತಾಮಲುಕ್** ಕೇಂದ್ರವು ಪೂರ್ವ ಹಾಗೂ ಪಶ್ಚಿಮ ಮೇದಿನೀಪುರ ಜಿಲ್ಲೆಗಳಲ್ಲಿರುವ ೨೬ ಶಾಲೆಗಳಲ್ಲಿ ಈ ಕೇಂದ್ರವು ನಡೆಸಿದ ವಿವಿಧ **ಸಾಂಸ್ಕೃತಿಕ ಸ್ಪರ್ಧೆ**ಗಳಲ್ಲಿ ಸುಮಾರು ೬೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಾರ್ಚ್ ೨೨ರಂದು ನಡೆದ ಕೊನೆಯ ಹಂತದ ಸ್ಪರ್ಧೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ೫೦೦ ಮಂದಿ ಪಾಲ್ಗೊಂಡರು.

**೨. ಇತರ ಕಾರ್ಯಕ್ರಮಗಳು:** **ವಿಶಾಖಪಟ್ಟಣ** ಕೇಂದ್ರದಲ್ಲಿ ಮಾರ್ಚ್ ೧ರಂದು **'ವಿವೇಕ್ ಇನಸ್ಟಿಟ್ಯೂಟ್ ಆಫ್ ಎಕ್ಸೆಲೆನ್ಸ್'** ಸಂಸ್ಥೆಯ ಉದ್ಘಾಟನೆ ನಡೆಯಿತು. ಈ ಸಂಸ್ಥೆಯಲ್ಲಿ, ಜೀವನದಲ್ಲಿ ಉನ್ನತಿಯನ್ನು ನೀಡಬಲ್ಲ ವಿವಿಧ ತರಬೇತಿ ಹಾಗೂ ಕಾರ್ಯಕ್ರಮಗಳು ನಡೆಯಲಿವೆ. **ವೃಂದಾವನ** ಸೇವಾಶ್ರಮದಲ್ಲಿ ಮಾರ್ಚ್ ೫ರಂದು **ಟೆಲೆಮೆಡಿಸಿನ್ ಸೇವೆ** ಹಾಗೂ ಎರಡು **ಮೊಬೈಲ್ ಮೆಡಿಕಲ್** ವ್ಯಾನುಗಳ ಸೇವೆಯನ್ನು ಆರಂಭಿಸಲಾಯಿತು. **ಔರಂಗಾಬಾದ್** ಕೇಂದ್ರವು ಮಾರ್ಚ್ ೭ರಿಂದ ೯ರ ವರೆಗೆ ಔರಂಗಾಬಾದ್ ಜಿಲ್ಲೆಯ ಪೈಠಣದಲ್ಲಿ (ಸಂತ ಏಕನಾಥರ ಜನ್ಮಸ್ಥಳ)'ನಾಥ ಷಷ್ಠಿ ಮೇಳ'ದ ಸಂದರ್ಭದಲ್ಲಿ **ವೈದ್ಯಕೀಯ ಶಿಬಿರ** ಹಾಗೂ ಸ್ವಾಮಿ ವಿವೇಕನಂದರನ್ನು ಕುರಿತಂತೆ **ಪ್ರದರ್ಶನ**ವನ್ನು ಏರ್ಪಡಿಸಿತು. ವೈದ್ಯಕೀಯ ಶಿಬಿರದಲ್ಲಿ ೩೯೪೭ ಮಂದಿ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. **ಅಸನ್ಸೋಲ್** ಆಶ್ರಮದಲ್ಲಿ ಮಾರ್ಚ್ ೨೪ರಂದು ನವೀಕರಣಗೊಂಡ **ವಿವೇಕಾನಂದ ಪಾರ್ಕ್** ಉದ್ಘಾಟನೆಗೊಂಡಿತು. ಪಶ್ಚಿಮ ಬಂಗಾಳ ರಾಜ್ಯದ ಕಾನೂನು ಮಂತ್ರಿಗಳ ಉಪಸ್ಥಿತಿಯಲ್ಲಿ ಪ್ರಧಾನ ಕಾರ್ಯದರ್ಶಿಯವರು ಇದನ್ನು ಉದ್ಘಾಟಿಸಿದರು. **ರಾಯಪುರ** ಕೇಂದ್ರವು ತನ್ನ **ಸುವರ್ಣ ಮಹೋತ್ಸವ**ವನ್ನು ಮಾರ್ಚ್ ೨೫ರಂದು ಆಚರಿಸಿತು. ಸಾರ್ವಜನಿಕ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ನಾಗಪುರ:** ಮಾರ್ಚ್ ೨೫ರಂದು ನೂತನವಾಗಿ ನಿರ್ಮಿತವಾದ **ವಿವಿಧ ಚಿಕಿತ್ಸೆಗಳ ಆಸ್ಪತ್ರೆ**ಯನ್ನು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಸ್ವಾಮಿ ಶಿವಮಯಾನಂದಜಿಯವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಮಾತನಾಡಿದರು. ಸುಮಾರು ೧೦೦ ಮಂದಿ ಭಾಗವಹಿಸಿದ್ದರು.

**ಮೌಲ್ಯ ಶಿಕ್ಷಣ ಹಾಗೂ ಯುವಸಮ್ಮೇಳನಗಳು:** **ದೆಹಲಿ** ಕೇಂದ್ರವು ಫೆಬ್ರವರಿ ೧೨ ರಿಂದ ಮಾರ್ಚ್ ೨೭ರ ಅವಧಿಯಲ್ಲಿ ನಡೆಸಿದ ೧೬ **ಮೌಲ್ಯ ಶಿಕ್ಷಣ ಶಿಬಿರ**ಗಳಲ್ಲಿ ೧೩೯ ಅಧ್ಯಾಪಕರು ಹಾಗೂ ಪ್ರಾಚಾರ್ಯರು ಭಾಗವಹಿಸಿದ್ದರು. ಈ ಶಿಬಿರಗಳು ದೆಹಲಿ, ಎರ್ನಾಕುಳಂ, ಗ್ವಾಲಿಯರ್, ಹೈದರಾಬಾದ್ ಮೈಸೂರು ಹಾಗೂ ರಾಂಚಿ – ಈ ಸ್ಥಳಗಳಲ್ಲಿ ನಡೆದವು. ಗುರಪ್ ಕೇಂದ್ರವು ಫೆಬ್ರವರಿ ೨೮ರಂದು ನಡೆಸಿದ **ಯುವ ಸಮ್ಮೇಳನ**ದಲ್ಲಿ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಸ್ವಚ್ಛ ಭಾರತ ಅಭಿಯಾನ:** **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಮಾರ್ಚ್ ೯, ೧೦, ೧೨ ಹಾಗೂ ೧೭ ರಂದು ವಿದ್ಯಾರ್ಥಿಗಳು ಎರಡು ಸಾರ್ವಜನಿಕರ ರಸ್ತೆಗಳನ್ನು ಸ್ವಚ್ಛಗೊಳಿಸಿದರು. ಇದಲ್ಲದೆ, ...ಶಾಲೆ ಹಾಗೂ ಸರ್ಕಾರಿ ಕಛೇರಿಯ ಪರಿಸರವನ್ನು ಕೂಡ ಸ್ವಚ್ಛಗೊಳಿಸಿದರು. **ಹಾತಿಮುನಿಗುಡ** ಕೇಂದ್ರವು ಮಾರ್ಚ್ ೨೫ ರಂದು ಸುತ್ತಮುತ್ತಣ ಪ್ರದೇಶಗಳ ಸ್ವಚ್ಛತಾ ಕಾರ್ಯಕ್ರಮವನ್ನು ನಡೆಸಿತು. ಇದಲ್ಲದೆ **ಕಾಮಾರಪುಕುರ, ಮಾಲ್ಡಾ** ಕೇಂದ್ರಗಳು ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿದವು. **ಮಂಗಳೂರು** ಆಶ್ರಮವು ಈ ಕೆಳಗಿನ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸಿತು. ೧) ಮಂಗಳೂರಿನಲ್ಲಿ ೪ ಸ್ವಚ್ಛತಾ ಕಾರ್ಯಕ್ರಮಗಳು ೨) ಮಂಗಳೂರಿನ ವಿವಿಧ ವಸತಿ ಪ್ರದೇಶಗಳಿಗೆ ೧೨೦೦ ಮಂದಿ ಸ್ವಯಂಸೇವಕರು ಭೇಟಿ ನೀಡಿ ೨೪೦೦, ಮನೆಗಳಲ್ಲಿ ಸ್ವಚ್ಛತೆಯ ಅರಿವನ್ನು ಮೂಡಿಸಲು ಪ್ರಯತ್ನಿಸಿದರು. ೩) ದಕ್ಷಿಣ ಕನ್ನಡ ಜಿಲ್ಲೆಯ ೭೨ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ರಮಗಳು ನಡೆದವು.

**ವಿದೇಶಗಳಲ್ಲಿರುವ ಶಾಖಾಕೇಂದ್ರಗಳಲ್ಲಿ:** ಬಾಂಗ್ಲಾದೇಶದ **ಢಾಕಾ** ಕೇಂದ್ರವು ವರ್ಷಪೂರ್ತಿ ನಡೆಸಿದ **ಶತಮಾನೋತ್ಸವದ ಸಮಾರೋಪ** ಸಮಾರಂಭವು ಫಬ್ರವರಿ ೨೬ರಿಂದ ಮಾರ್ಚ್ ೩ರ ವರೆಗೆ ನಡೆಯಿತು. ವಿಶೇಷ ಪೂಜೆ, ಸಾರ್ವಜನಿಕ ಸಭೆ, ಯುವಸಮ್ಮೇಳನಗಳು, ಭಕ್ತರಿಗಾಗಿ ಹಾಗೂ ಮಹಿಳೆಯರಿಗಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂದರ್ಭದಲ್ಲಿ ನಡೆದವು. ಪ್ರಧಾನ ಕಾರ್ಯದರ್ಶಿಗಳು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಬಾಂಗ್ಲಾದೇಶ ಸರ್ಕಾರದ ಹಲವು ಮಂದಿ ಸಚಿವರು ಹಾಗೂ ಅಧಿಕಾರಿಗಳು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

Managing Editor : Swami Atmajnananda Editor : Swami Jnanayogananda

Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020